

بسم اللهِ الرّحمٰن الرّحيم

# ಹಝ್ರತ್ ಮುಸ್ಲಿಹ್ ಮೌಊದ್(ರಝಿಯಲ್ಲಾಹು ಅನ್‌ಹುರವ)ರು ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ)ರ ಬಗ್ಗೆ ನಿವೇದಿಸಿದ ಕೆಲವು ವಿಶ್ವಾಸ ವರ್ಧಕ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **24-10-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* **ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:**

ಎರಡು ದಿನಗಳ ಹಿಂದೆ ಅಲ್ ಫಝ್ಲ್ ಇಂಟರ್‌ನೇಶನಲ್ ಪತ್ರಿಕೆಯ ಹೊಸ ಸಂಚಿಕೆಯನ್ನು ನೋಡಿದಾಗ ಅದರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಒಂದು ಪ್ರಭಾಷಣದ ಒಂದು ಭಾಗವನ್ನು ನಾನು ನೋಡಿದೆ. 1937ರಲ್ಲಿ ಅವರು ಹೀಗೆ ಹೇಳಿದ್ದರು: ಈಗ ಹಲವು ಸಹಾಬರು ಜೀವಂತವಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಘಟನೆಗಳನ್ನು ಮತ್ತು ಅವರ ಮಾತುಗಳನ್ನು ಈ ಸಹಾಬರಿಂದ ಆಲಿಸಿ ದಾಖಲಿಸಬೇಕು. ಯಾಕೆಂದರೆ ಮುಂದಿನ ಕಾಲದಲ್ಲಿ ಹಲವು ಸಮಸ್ಯೆಗಳ ಪರಿಹಾರಕ್ಕೆ ಈ ವಿಷಯಗಳು ಮಹತ್ವಪೂರ್ಣ ಮಾರ್ಗದರ್ಶನವಾಗಬಹುದು.

ಈ ದಿನ ನಾನು ಹಝ್ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು ತನಗೆ ಸಂಬಂಧಿಸಿ ಮತ್ತು ಅನ್ಯರಿಗೆ ಸಂಬಂಧಿಸಿ ವಿವರಿಸಿದ ಕೆಲವು ಘಟನೆಗಳನ್ನು ಪ್ರಸ್ತಾಪಿಸುವೆನು. ಅವುಗಳಲ್ಲಿ ಸದುಪದೇಶಗಳೂ ಇವೆ. ಕೆಲವು ವಿಷಯಗಳ ವಿಶದೀಕರಣವೂ ಇರುತ್ತದೆ. ನಾನು ಈ ದಿನ ವಿವಿಧ ವಿಷಯಗಳಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ವಿವರಿಸುವೆನು. ಮುಂದೆ ಸಹ ಸಂದರ್ಭ ದೊರೆತಾಗ ಬೇರೆ ಕೆಲವು ಘಟನೆಗಳನ್ನು ವಿವರಿಸುವೆನು- إِنْ شَاءَ اللّٰهُ. ನಾನು ಖುತುಬದಲ್ಲಿ ಇವುಗಳನ್ನು ವಿವರಿಸುವುದೇಕೆಂದರೆ M.T.A ಮೂಲಕ ಖುತುಬ ಬಹಳ ಹೆಚ್ಚು ಆಲಿಸಲ್ಪಡುತ್ತದೆ. ಕೆಲವು ಸಮಸ್ಯೆಗಳ ಪರಿಹಾರಕ್ಕೆ ಇವುಗಳು ಸಹಕಾರಿ ಆಗುತ್ತವೆ. ಇವುಗಳು ಪ್ರತಿಯೊಬ್ಬ ಅಹ್ಮದಿಗೆ ತಲಪಬೇಕಾದುದು ಆವಶ್ಯಕವಾಗಿದೆ. ಖುತುಬವೇ ಅವುಗಳನ್ನು ತಲಪಿಸುವ ಅತ್ಯುತ್ತಮ ಮಾರ್ಗವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: “ಒಂದು ದಿನ ನಾನು ನಮ್ಮ ಮನೆಯ ಬಾಗಿಲಿನ ಹತ್ತಿರ ನಿಂತಿದ್ದಾಗ ಅಲ್ಲಿಗೆ ಒಂದು ನಾಯಿ ಬಂತು. ಮನೆಯೊಳಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾತ್ರ ಇದ್ದರು. ನಾನು ಆ ನಾಯಿಯನ್ನು **‘ಟಿಪ್ಪು ಟಿಪ್ಪು’** ಎಂದು ಕರೆದೆನು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಕೋಪಗೊಂಡು ಮನೆಯ ಹೊರಗೆ ಬಂದು ಹೇಳಿದರು: ನಿನಗೆ ನಾಚಿಕೆ ಆಗುವುದಿಲ್ಲವೇ? ಆಂಗ್ಲೇಯರು ಹಗೆತನದ ಕಾರಣ ತಮ್ಮ ನಾಯಿಗಳಿಗೆ ಒಬ್ಬ ಸತ್ಯಸಂಧ ಮುಸ್ಲಿಮನಾಗಿದ್ದ ಟಿಪ್ಪುವಿನ ಹೆಸರನ್ನು ಇರಿಸಿದರು. ನೀನು ಅವರನ್ನು ಅನುಕರಿಸಿ ನಾಯಿಯನ್ನು ಟಿಪ್ಪು ಎಂದು ಕರೆಯುತ್ತಿರುವೆ. ಖಬರ್‌ದಾರ್, ಇನ್ನು ಮುಂದೆ ಹೀಗೆ ಹೇಳಬಾರದು.”

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಘಟನೆ ಬಗ್ಗೆ ಹೀಗೆ ಬರೆಯುತ್ತಾರೆ: “ಆಗ ನನ್ನ ಪ್ರಾಯ ಎಂಟು-ಒಂಬತ್ತು ವರ್ಷವಾಗಿರಬಹುದು. ಸುಲ್ತಾನ್ ಟಿಪ್ಪುರವರ ಬಗ್ಗೆ ಆ ದಿನದಿಂದ ನನ್ನ ಹೃದಯದಲ್ಲಿ ಪ್ರೀತಿ ಸ್ಫುರಿಸಿತು. ಸುಲ್ತಾನ್ ಟಿಪ್ಪುರವರ ಬಲಿದಾನ ವ್ಯರ್ಥವಾಗಲಿಲ್ಲವೆಂದು ನನಗೆ ಮನವರಿಕೆ ಆಯಿತು. ಅವರ ಹೆಸರಿಗೆ ಅಲ್ಲಾಹನು ಎಂತಹ ಅನುಗ್ರಹ ನೀಡಿದನೆಂದರೆ ಅಲ್ಲಾಹನು ನೇಮಿಸಿದ ಈ ಕಾಲಘಟ್ಟದ ಇಮಾಮ್ ಅವರನ್ನು ಗೌರವಿಸುತ್ತಾರೆ. ಅವರ ಬಗ್ಗೆ ಅಭಿಮಾನವನ್ನು ಹೊಂದಿದ್ದಾರೆ.

ಈ ಘಟನೆಯಿಂದ ತಿಳಿಯುವುದೇನೆಂದರೆ ಚಿಕ್ಕ ವಯಸ್ಸಿನ ಮಕ್ಕಳು ಮಾಡುವ ಪ್ರತಿಯೊಂದು ಕೆಲಸವನ್ನು ಸಹಿಸುವುದು ಸರಿಯಾದುದಲ್ಲ. ಅದು **‘ಹಿಲ್ಮ್’** ಎಂಬ ಗುಣಕ್ಕೆ ಅನುಯೋಜ್ಯವಾಗುವುದಿಲ್ಲ. ಈ ಘಟನೆಯಿಂದ**,** ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಧರ್ಮದ ಬಗ್ಗೆ ಮತ್ತು ಮುಸ್ಲಿಮ್ ಸಮುದಾಯದ ಬಗ್ಗೆ ಹೊಂದಿದ್ದ ಅಭಿಮಾನ ಸ್ಪಷ್ಟವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ಕಷ್ಟಪಟ್ಟು ಬರೆದ ಲೇಖನಗಳ ಕರಡು ಪ್ರತಿಯನ್ನು ಅದೇ ಹುಡುಗ ಎಣ್ಣೆಹೊಯ್ದು ಸುಟ್ಟು ಹಾಕಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅದನ್ನು ಸಹಿಸಿದ್ದರು. ಅದರ ಬಗ್ಗೆ ಬೇಸರ ಸೂಚಿಸದೆ ಬಹಳ ಕಷ್ಟಪಟ್ಟು ಅದನ್ನು ಪುನಃ ಬರೆದರು.

ಆ ಘಟನೆ ಯಾವುದೆಂದರೆ, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹುಡುಗನಾಗಿದ್ದಾಗ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದ ಒಂದು ಗ್ರಂಥದ ಕರಡು ಪ್ರತಿಯನ್ನು ಆಟವಾಡುತ್ತಾ ಸಂಪೂರ್ಣ ಸುಟ್ಟು ಹಾಕಿದ್ದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅದರ ಬಗ್ಗೆ ತನ್ನ ಅತೃಪ್ತಿ ಸೂಚಿಸಿರಲಿಲ್ಲ.”

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುವುದೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕಷ್ಟಪಟ್ಟು ಬರೆದ ಪುಸ್ತಕದ ಕರಡು ಪ್ರತಿಯನ್ನು ಸುಟ್ಟು ಹಾಕಿದಾಗ ಅವರು ಅದನ್ನು ಸಹಿಸಿದರಾದರೂ ಸಮುದಾಯದ ಒಬ್ಬ ರಾಷ್ಟ್ರೀಯ ನಾಯಕನನ್ನು ಒಂದಿಷ್ಟು ನಿಂದಿಸುವುದನ್ನು ಅವರು ಸಹಿಸಲಿಲ್ಲ. ಒಬ್ಬ ಮುಸ್ಲಿಮ್ ಸುಲ್ತಾನ್ ಮುಸ್ಲಿಮ್

ಸಮುದಾಯದ ಅಭಿಮಾನ ಕಾಪಾಡಲು ಶಹೀದರಾದರು. ಅವರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಸ್ಲಾಮ್ ಧರ್ಮದ ಹೊರತು ಬೇರೆ ಯಾವ ಸಂಬಂಧವೂ ಇರಲಿಲ್ಲ. ಆ ಸುಲ್ತಾನರ ಹೆಸರನ್ನು ಒಬ್ಬ ಹುಡುಗ ಅಜ್ಞಾನದಿಂದಾದರೂ ಅಪಮಾನಕರವಾಗಿ ಬಳಸುವುದನ್ನು ಅವರಿಗೆ ಸಹಿಸಲಾಗಲಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಆಂಗ್ಲೇಯರ ಏಜೆಂಟ್ ಎಂದು ಕರೆಯುವ ದುಸ್ಸಾಹಸ ಮಾಡುವವರಿಗೆ ಈ ಘಟನೆಯಿಂದ ಪಾಠ ಲಭಿಸುತ್ತದೆ. ಸಾಮುದಾಯಿಕ ಅಭಿಮಾನದಿಂದ ತುಂಬಿ ತುಳುಕುತ್ತಿದ್ದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೃದಯ ಸುಲ್ತಾನ್ ಫತ್‌ಹ್ ಅಲಿ ಟಿಪ್ಪುರವರನ್ನು ಅತ್ಯಂತ ಆದರ ಭಾವದಿಂದ ಕಾಣುತ್ತಾ ಇದ್ದುದು ಏಕೆಂದರೆ ಟಿಪ್ಪು ಸುಲ್ತಾನರು ಆಂಗ್ಲೇಯರ ಎದುರಿಗೆ ತಲೆಬಾಗುವುದಕ್ಕೆ ಬದಲಾಗಿ ತನ್ನ ಜೀವವನ್ನು ಪೌರುಷದಿಂದ ಬಲಿಯರ್ಪಿಸಿದ್ದರು. ಇಂತಹ ಆತ್ಮಾಭಿಮಾನಿಯಾದ ಮನುಷ್ಯನ ಬಗ್ಗೆ ಅನ್ಯ ಜನಾಂಗದ ಏಜೆಂಟ್ ಆಗುವ ಶಂಕೆ ಸಹ ಮನಸ್ಸಿನಲ್ಲಿ ಉದಿಸುವುದು ಹೇಗೆ ತಾನೆ ಸಾಧ್ಯ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ಮಕ್ಕಳಲ್ಲಿ ಬಾಜಮಾಅತ್(ಸಾಮೂಹಿಕವಾಗಿ) ನಮಾಝ್ ಮಾಡುವ ಅಭ್ಯಾಸವನ್ನು ಮಾಡಿಸದ ತಂದೆ ತಾಯಿಗಳಿಗಿಂತ ದೊಡ್ಡ ಶತ್ರುಗಳು ಬೇರೆ ಯಾರೂ ಇಲ್ಲ ಎಂದು ನನ್ನ ಅಭಿಪ್ರಾಯವಾಗಿದೆ. ನನಗೆ ಸಂಬಂಧಿಸಿದ ಒಂದು ಘಟನೆ ನನಗೆ ನೆನಪಿದೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ರೋಗಬಾಧಿತರಾಗಿದ್ದ ಕಾರಣ ಜುಮುಅ ನಮಾಝ್‌ಗೆ ಮಸ್‌ಜಿದ್‌ಗೆ ಹೋಗಿರಲಿಲ್ಲ. ನಾನು ಆಗ ಪ್ರಾಪ್ತ ವಯಸ್ಕನಾಗಿರಲಿಲ್ಲ. ಪ್ರಾಪ್ತ ವಯಸ್ಕರಿಗೆ ಅನ್ವಯಿಸುವ ನಿಯಮಗಳು ನನ್ನ ಮೇಲೆ ಕಡ್ಡಾಯವಾಗಿರಲಿಲ್ಲ. ನಾನು ಚಿಕ್ಕ ಹುಡುಗನಾಗಿದ್ದೆ. ನಾನು ಮಸ್‌ಜಿದ್‌ಗೆ ಜುಮುಅ ನಮಾಝ್‌ಗೆ ಹೋಗುತ್ತಿದ್ದಾಗ ನನಗೊಬ್ಬರು ಕಾಣಲು ಸಿಕ್ಕಿದರು. ನನ್ನ ಪ್ರಾಯದ ದೃಷ್ಟಿಯಿಂದ ನೋಡುವುದಾದರೆ ನನಗೆ ಅವರ ನೆನಪು ಬಾಕಿಯಾಗಿರಲು ಸಾಧ್ಯವಿರಲಿಲ್ಲ. ಆದರೆ ಆ ದಿನದ ಘಟನೆ ನನ್ನ ಮೇಲೆ ಎಂತಹ ಪ್ರಭಾವ ಬೀರಿತು ಎಂದರೆ ನಾನು ಅವರನ್ನು ನೆನಪಿನಲ್ಲಿಟ್ಟುಕೊಂಡಿದ್ದೇನೆ. ಮುಹಮ್ಮದ್ ಭಕ್ಷ್ ಎಂಬ ಅವರು ಈಗಲೂ ಜೀವಿಸಿದ್ದಾರೆ. ನಾನು ಅವರೊಂದಿಗೆ ಕೇಳಿದೆ: ನೀವು ಮರಳಿ ಬರುತ್ತಿದ್ದೀರಿ. ಏನು ನಮಾಝ್ ಮುಗಿಯಿತೇ? ಅವರು ಹೇಳಿದರು– ಇಲ್ಲ ಬಹಳ ಜನರು ಬಂದ ಕಾರಣ ಮಸ್‌ಜಿದ್‌ನಲ್ಲಿ ಸ್ಥಳವಿರಲಿಲ್ಲ. ನಾನು ಮರಳಿ ಬಂದೆನು. ಅವರ ಮಾತನ್ನು ಕೇಳಿ ನಾನು ಸಹ ಮನೆಗೆ ಹಿಂದಿರುಗಿ ಅಲ್ಲಿಯೇ ನಮಾಝ್ ಮಾಡಿದೆನು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನನ್ನೊಂದಿಗೆ ಕೇಳಿದರು: ನಮಾಝ್‌ಗೋಸ್ಕರ ಮಸ್‌ಜಿದ್‌ಗೆ ಏಕೆ ಹೋಗಲಿಲ್ಲ? ನಾನು ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಒಬ್ಬ ನಬಿ ಎಂಬ ದೃಷ್ಟಿಯಲ್ಲಿ ಬಹಳ ಗೌರವಿಸುತ್ತಿದ್ದೆನು. ಆ ವೇಳೆಯ ಅವರ ಮಾತಿನಲ್ಲಿ ಕಠಿಣತೆ ಇತ್ತು. ಅವರು ಸಿಟ್ಟಾಗಿದ್ದಾರೆಂದು ನನಗೆ ತೋರಿತು. ಅವರು ಕೇಳಿದಾಗ ನಾನು ಹೇಳಿದೆ: ನಾನು ಮಸ್‌ಜಿದ್‌ಗೆ ಹೋದೆ. ಆದರೆ ಸ್ಥಳವಿಲ್ಲದ ಕಾರಣ ಹಿಂದಿರುಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗ ಸುಮ್ಮನಾದರು. ಆದರೆ ನಂತರ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಆರೋಗ್ಯದ ಬಗ್ಗೆ ವಿಚಾರಿಸಲು ಬಂದಾಗ ಎಲ್ಲದಕ್ಕಿಂತ ಮೊದಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರನ್ನು ಕೇಳಿದುದು ಏನು ಈ ದಿನ ಮಸ್‌ಜಿದ್‌ನಲ್ಲಿ ಬಹಳ ಹೆಚ್ಚು ಜನರು ಇದ್ದರೇ? ಎಂದಾಗಿತ್ತು. ಆಗ ನನ್ನ ಹೃದಯದಲ್ಲಿ ಬಹಳ ಗಾಬರಿ ಉಂಟಾಗಿತ್ತು. ಏಕೆಂದರೆ ನಾನು ಸ್ವತಃ ಮಸ್‌ಜಿದ್‌ಗೆ ಹೋಗಿರಲಿಲ್ಲ. ಒಂದು ವೇಳೆ ನನ್ನೊಂದಿಗೆ ಹೇಳಿದ ವ್ಯಕ್ತಿಗೆ ತಪ್ಪು ಗ್ರಹಿಕೆ ಉಂಟಾಗಿರಲೂಬಹುದು. ಅಥವಾ ನನಗೆ ಅವರ ಮಾತಿನಿಂದ ತಪ್ಪು ಗ್ರಹಿಕೆ ಆಗಿರಲೂ ಸಾಧ್ಯವಿದೆ. ಏನಿದ್ದರೂ ನಾನು ಹೇಳಿದುದು ಸುಳ್ಳಾಗುವುದೇ ಎಂಬ ಭಯ ನನಗಿತ್ತು. ಆಗ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬ್ ಹೇಳಿದರು. ಹೌದು ಹುಝೂರ್, ಈ ದಿನ ಮಸ್‌ಜಿದ್‌ಗೆ ಬಹಳ ಹೆಚ್ಚು ಜನ ಬಂದಿದ್ದರು. ನಿಜವಾಗಿಯೂ ಮಸ್‌ಜಿದ್‌ನಲ್ಲಿ ಆ ದಿನದ ಸ್ಥಿತಿ ಹೇಗಿತ್ತೆಂದು ನನಗೆ ತಿಳಿಯದು. ಆದರೆ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರ ಮಾತಿನಿಂದ ನನ್ನ ಹೇಳಿಕೆ ಸರಿ ಹೊಂದುವಂತಾಯಿತು. ಈ ಘಟನೆ ಹೇಗಿದೆ ಎಂದರೆ ಅದು ನನ್ನ ಹೃದಯದ ಮೇಲೆ ಬಹಳ ಪ್ರಭಾವ ಬೀರಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಾಜಮಾಅತ್ ನಮಾಝ್ ಬಗ್ಗೆ ಎಷ್ಟು ಕಾಳಜಿ ಇತ್ತು ಎಂದು ಈ ಘಟನೆಯಿಂದ ತಿಳಿಯುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: "ನಾನು ಬಾಲಕನಾಗಿದ್ದಾಗ ನಮ್ಮ ಅಜ್ಜ ಹಝ್ರತ್ ಮೀರ್ ನಾಸಿರ್ ನವಾಬ್ ಸಾಹೇಬ್ ರಝಿಯಲ್ಲಾಹು ಅನ್‌ಹು ಉರ್ದು ಭಾಷೆಯಲ್ಲಿ ನನಗಿರುವ ಜ್ಞಾನದ ಬಗ್ಗೆ ಪರೀಕ್ಷೆ ನಡೆಸಿದರು. ಈಗ ಸಹ ನಾನು ಬರೆಯುವ ಅಕ್ಷರಗಳು ಚೆನ್ನಾಗಿಲ್ಲ. ಅಂದಿನ ಕಾಲದಲ್ಲಿ ನನ್ನ ಕೈಬರಹ ಎಷ್ಟು ಕೆಟ್ಟದಾಗಿತ್ತೆಂದರೆ ಅದನ್ನು ಓದಲು ಸಾಧ್ಯವಾಗುತ್ತಿರಲಿಲ್ಲ. ನಾನು ಬರೆದುದನ್ನು ಓದಲು ನನ್ನ ಅಜ್ಜ ಬಹಳ ಪ್ರಯತ್ನಿಸಿದರೂ ಅವರಿಗೆ ಅದನ್ನು ಓದಲಾಗಲಿಲ್ಲ. ಅವರು ಬೇಗನೆ ಕೋಪಗೊಳ್ಳುವವರಾಗಿದ್ದರು. ಅವರು ಕೂಡಲೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪಕ್ಕೆ ಹೋದರು. ಅಲ್ಲಿ ನಾನು ಸಹ ಇದ್ದೆನು. ನಾವು ಅವರ ಸಿಟ್ಟಿನ ಬಗ್ಗೆ ಬಹಳ ಹೆದರುತ್ತಿದ್ದೆವು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ದೂರು ಕೊಡಲು ಹೋದಾಗ ನನಗೆ ಹೆಚ್ಚು ಭಯ ಉಂಟಾಯಿತು. ನಮ್ಮ ಅಜ್ಜ ಹೇಳಿದರು: "ನೀವು ಮಹ್‌ಮೂದನ ವಿದ್ಯಾಭ್ಯಾಸದ ಬಗ್ಗೆ ಸ್ವಲ್ಪವಾದರೂ ಗಮನ

ಕೊಡುವುದಿಲ್ಲ. ನಾನು ಅವನನ್ನು ಈದಿನ ಪರೀಕ್ಷಿಸಿದೆ. ಅವನ ಉತ್ತರದ ಹಾಳೆಯನ್ನು ನೀವೊಮ್ಮೆ ನೋಡಿರಿ. ಅವನ ಬರಹ ಎಷ್ಟು ಕೆಟ್ಟದಾಗಿದೆಯೆಂದರೆ, ಅದನ್ನು ಓದಲು ಯಾರಿಂದಲೂ ಸಾಧ್ಯವಿಲ್ಲ.'' ಅನಂತರ ಸಿಟ್ಟಿನಿಂದ ಹೀಗೆ ಹೇಳಿದರು: ``ನೀವು ತೀರ ಗಮನಿಸುವುದಿಲ್ಲ. ಹುಡುಗನ ಆಯುಸ್ಸು ವ್ಯರ್ಥವಾಗುತ್ತಿದೆ.''

ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮೌಲವಿ ನೂರುದ್ದೀನ್ ಸಾಹೇಬ್ ರಝಿಯಲ್ಲಾಹು ಅನ್‌ಹುರವರನ್ನು ಕರೆಸಿದರು. ಯಾವುದಾದರೂ ಸಮಸ್ಯೆ ತಲೆದೋರಿದಾಗ ಅವರು ಹಝ್ರತ್ ಮೌಲವಿ ಸಾಹೇಬರನ್ನು ಕರೆಸುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ನನ್ನ ಬಗ್ಗೆ ಬಹಳ ಪ್ರೀತಿ ಇತ್ತು. ಹಝ್ರತ್ ಮೌಲವಿ ಸಾಹೇಬರು ಬಂದು ತಲೆ ತಗ್ಗಿಸಿ ಒಂದು ಕಡೆ ನಿಂತುಕೊಂಡರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ``ಮೀರ್ ಸಾಹೇಬರು ಹೇಳುತ್ತಾರೆ ಮಹ್‌ಮೂದ್ ಬರೆದುದನ್ನು ಓದಲು ಆಗುವುದಿಲ್ಲ ಎಂದು. ಅವನನ್ನು ಪರೀಕ್ಷಿಸಲು ನಾನು ಬಯಸುತ್ತೇನೆ.'' ಅವರು ತನ್ನ ಲೇಖನಿ ತೆಗೆದು ಮೂರು ವಾಕ್ಯಗಳನ್ನು ಬರೆದು ನನಗೆ ತೋರಿಸಿ ಅದನ್ನು ಕಾಪಿಮಾಡಲು ಹೇಳಿದರು. ನಾನು ಬಹಳ ಜಾಗರೂಕತೆಯಿಂದ ಅದನ್ನು ನಕಲು ಮಾಡಿದೆನು. ಆ ವಾಕ್ಯಗಳು ದೀರ್ಘವೇನೂ ಇರಲಿಲ್ಲ. ಅದಲ್ಲದೆ ನಕಲು ಮಾಡುವುದು ಸುಲಭವೇ ಆಗಿತ್ತು. ನಾನು ಮೆಲ್ಲಗೆ ಬರೆದೆ. ಬಹಳ ಜಾಗರೂಕತೆಯಿಂದ ಅಕ್ಷರಗಳನ್ನು ಸರಿಯಾಗಿ ಬರೆದೆ. ಅದನ್ನು ನೋಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ``ಮೀರ್ ಸಾಹೇಬರ ಮಾತನ್ನು ಕೇಳಿ ನನಗೆ ಚಿಂತೆ ತಲೆದೋರಿತ್ತು. ಆದರೆ ಮಹ್‌ಮೂದ್ ಬರೆದ ಬರಹ ನನ್ನ ಬರಹದ ಹಾಗೆಯೇ ಇದೆ.'' ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ನನ್ನ ಬಗ್ಗೆ ಮೊದಲೇ ಸಹಾನುಭೂತಿ ಹೊಂದಿದ್ದರು. ಅವರು ಹೇಳಿದರು: 'ಮೀರ್ ಸಾಹೇಬರು ಸುಮ್ಮನೆ ಕೋಪಾವಿಷ್ಟರಾಗಿದ್ದಾರೆ. ಮಹ್‌ಮೂದ್ ಬರೆದುದು ಚೆನ್ನಾಗಿಯೇ ಇದೆ.'

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಜಮಾಅತನ್ನು ಮತ್ತು ಪ್ರವಾದಿಯನ್ನು ಶತ್ರುಗಳು ವಿರೋಧಿಸುವುದರಿಂದ ಅಭಿವೃದ್ಧಿಯೇ ಉಂಟಾಗುತ್ತದೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ಸಾರಿ ಹೀಗೆ ಹೇಳುತ್ತಾ ಇದ್ದರು: 'ಶತ್ರುಗಳು ನಮ್ಮನ್ನು ಬೈಯ್ಯುವಾಗ ಮತ್ತು ನಮ್ಮನ್ನು ವಿರೋಧಿಸುವಾಗ ಅವರ ಪೈಕಿ ಸಾತ್ವಿಕರಾದ ಜನರು ನಮ್ಮ ಕಡೆಗೆ ಬರುವರೆಂಬ ಪ್ರತೀಕ್ಷೆ ನಮ್ಮಲ್ಲಿ ಉಂಟಾಗುತ್ತದೆ. ಜನರು ನಮ್ಮನ್ನು ಬೈಯ್ಯದಿರುವಾಗ, ನಮ್ಮನ್ನು ವಿರೋಧಿಸದೆ ಇರುವಾಗ ಮತ್ತು ಸಂಪೂರ್ಣವಾಗಿ ಮೌನವನ್ನು ಅವಲಂಬಿಸುವಾಗ ನಮಗೆ ಬಹಳ ಕಷ್ಟವಾಗುತ್ತದೆ.' ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು: ನಬಿಯ ಉದಾಹರಣೆ ಒಬ್ಬ ಮುದುಕಿಯ ಹಾಗಿದೆ. ಅವಳ ಬಗ್ಗೆ ಅವಳಿಗೆ ಅರೆ ಮರುಳು ಇದೆ ಎಂದು ಪ್ರಸಿದ್ಧವಾಗಿ ನಗರದ ಮಕ್ಕಳು ಅವಳನ್ನು ಛೇಡಿಸುತ್ತಾ ಇದ್ದರು. ಆಕೆ ಮಕ್ಕಳನ್ನು ಬೈಯುತ್ತಾ ಅವರ ವಿರುದ್ಧ ಪ್ರಾರ್ಥಿಸುತ್ತಾ ಇದ್ದಳು. ಮಕ್ಕಳ ತಂದೆ ತಾಯಂದಿರು ಹೀಗೆ ನಿರ್ಧರಿಸಿದರು. ಮಕ್ಕಳು ಆ ಮುದುಕಿಯನ್ನು ತೊಂದರೆ ಪಡಿಸದಂತೆ ಮಾಡಬೇಕೆಂದು. ಮಕ್ಕಳಿಗೆ ಬುದ್ಧಿ ಹೇಳಿದಾಗ ಮಕ್ಕಳು ತಂದೆ ತಾಯಂದಿರ ಉಪದೇಶಗಳಿಗೆ ಕಿವಿಗೊಡಲಿಲ್ಲ. ಕೊನೆಗೆ ತಂದೆ ತಾಯಂದಿರು ಮಕ್ಕಳನ್ನು ಮನೆಯಿಂದ ಹೊರಗೆ ಹೋಗದಂತೆ ತಡೆದು ಎಲ್ಲರೂ ಮನೆ ಬಾಗಿಲುಗಳನ್ನು ಮುಚ್ಚಿಟ್ಟರು. ಎರಡು ಮೂರು ದಿನಗಳ ಕಾಲ ಹೀಗೆ ಮಾಡಿದಾಗ ಆ ಮುದುಕಿ ಮನೆ ಮನೆಗಳಿಗೆ ಹೋಗಿ ಹೇಳಲು ತೊಡಗಿದಳು: ನಿಮ್ಮ ಮಕ್ಕಳು ಎಲ್ಲಿಗೆ ಹೋದರು. ಅವರನ್ನು ಹಾವು ಕಚ್ಚಿತೋ, ಕಾಲರಾ ರೋಗದಿಂದ ಸತ್ತರೋ, ಚಾವಣಿಯಿಂದ ಬಿದ್ದು ಸತ್ತರೋ, ಸಿಡಿಲು ಮಿಂಚು ಬಡಿದು ಸತ್ತರೋ. ಮುದುಕಿ ಪ್ರತಿಯೊಂದು ಮನೆ ಬಾಗಿಲಿಗೆ ಹೋಗಿ ವಿವಿಧ ರೀತಿ ಹೇಳುತ್ತಾ ಇದ್ದಳು.

ತಂದೆ ತಾಯಂದಿರು ಯೋಚಿಸಿದರು– ಮುದುಕಿ ಮೊದಲಿಗಿಂತ ಹೆಚ್ಚು ಬೈಯ್ಯಲು ಮತ್ತು ಶಾಪ ನೀಡಲು ತೊಡಗಿದ್ದಾಳೆ. ಮಕ್ಕಳನ್ನು ಬಂಧನದಲ್ಲಿ ಇಡುವುದರಿಂದ ಪ್ರಯೋಜನವೇನು? ಹೀಗೆ ಯೋಚಿಸಿ ಮಕ್ಕಳನ್ನು ಸ್ವತಂತ್ರವಾಗಿ ತಿರುಗಾಡಲು ಬಿಟ್ಟರು.

ಪ್ರವಾದಿಗಳ ಸ್ಥಿತಿಯೂ ಹೀಗೆಯೇ ಆಗಿದೆ. ಶತ್ರುತ್ವ ವರ್ಧಿಸುವಾಗ ಪ್ರವಾದಿಗೆ ಕಷ್ಟವಾಗುತ್ತದೆ. ವಿರೋಧ ಮೌನವಾಗುವಾಗಲೂ ಪ್ರವಾದಿಗೆ ಕಷ್ಟವಾಗುತ್ತದೆ. ಏಕೆಂದರೆ ವಿರೋಧ ತಲೆದೋರದೆ ಇರುವಾಗ ದೈವಿಕ ಜಮಾಅತ್ ಬಗ್ಗೆ ಜನರ ಗಮನ ಹರಿಯುವುದಿಲ್ಲ. ಪ್ರವಾದಿಯಿಂದ ಜನರ ಕಡೆಗೆ ಬೈಗಳಂತೂ ಬರುವುದಿಲ್ಲ. ಪ್ರವಾದಿಯಿಂದ ಯಾವಾಗಲೂ ಶುಭಕೋರುವ ಪ್ರಾರ್ಥನೆಗಳೇ ಸಿಗುತ್ತವೆ. ಆದರೆ ವಿರೋಧ ಅತಿಯಾಗುವಾಗ ವಿರೋಧಿಗಳ ಬಗ್ಗೆ ಸಹ ಪ್ರಾರ್ಥನೆಗಳಿರುತ್ತವೆ– ಅವರ ಪೈಕಿ ಸಾತ್ವಿಕರಾದವರು ಸತ್ಯವನ್ನು ಅಂಗೀಕರಿಸುವಂತಾಗಲು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆದಿದ್ದಾರೆ: ``ಅಲ್ಲಾಹನ ಅನುಗ್ರಹಗಳು ನದಿ ನೀರಿನ ಹಾಗಿದೆ. ನದಿಯಿಂದ ಒಂದು ಬಿಂದು ನೀರನ್ನು ತೆಗೆದುಕೊಂಡರೆ ಅದರಲ್ಲಿ ಯಾವುದೇ ಕೊರತೆ ಉಂಟಾಗಲಾರದು. ಮನುಷ್ಯನು ಎಂತಹ ದುರದೃಷ್ಟಶಾಲಿ ಯಾಗಿರುವನೆಂದರೆ ಅವನು ಅಲ್ಲಾಹನ ಅನುಗ್ರಹದಿಂದ ತನ್ನನ್ನು ವಂಚಿಸಿಕೊಳ್ಳುತ್ತಾನೆ ಮತ್ತು ಅದರಿಂದ ಮುಖ ತಿರುಗಿಸುತ್ತಾನೆ. ಅಲ್ಲಾಹನು ನೇಮಿಸಿದ ಯಾರಾದರೂ ಆಗಮಿಸಿದರೆ ಜನರು ಅವರನ್ನು ಕೀಳೆಂದು ಭಾವಿಸಿ ಅವರನ್ನು ನಿರಾಕರಿಸುತ್ತಾರೆ. ಉದಾಹರಣೆಗೆ ಹಝ್ರತ್ ಬಾಬಾ ನಾನಕ್ ರವರ ತಂದೆ ತಾಯಿ ಸಹ ಅವರ ಬಗ್ಗೆ ಕೆಟ್ಟ ಭಾವನೆ ಹೊಂದಿದ್ದರು. ಇವನು ನಮ್ಮ ವ್ಯಾಪಾರ

ಹಾಳುಮಾಡಿದ. ನಮ್ಮ ಮನೆಯಲ್ಲಿ ಹುಟ್ಟಿದ ಈ ಮಗು ನಿಷ್ಪ್ರಯೋಜಕವಾಗಿದೆ, ಎಂದೆಲ್ಲಾ ಅವರು ಯೋಚಿಸುತ್ತಿದ್ದರು. ಅವರು ಈಗೇನಾದರೂ ಜೀವಂತರಾಗಿ ಈ ಲೋಕಕ್ಕೆ ಬಂದರೆ ಅವರು ಕಾಣುತ್ತಿದ್ದರು. ನಾವು ನಿಷ್ಪ್ರಯೋಜಕನೆಂದು ಗ್ರಹಿಸಿದವನಿಗೋಸ್ಕರ ಜೀವಾರ್ಪಣೆ ಮಾಡಲು ಲಕ್ಷಾಂತರ ಜನರು ಸಿದ್ಧರಾಗಿದ್ದಾರೆ ಎಂದು. ಅವರಲ್ಲಿ ಕೋಟ್ಯಾಧಿಪತಿಗಳು ಸಹ ಇದ್ದಾರೆ ಎಂದು ತಿಳಿಯುವಾಗ ಅವರು ಆಶ್ಚರ್ಯ ಚಕಿತರಾಗುತ್ತಿದ್ದರು.''

''ಜನರು ಅವಿವೇಕದಿಂದ ಸತ್ಯವಾದಿಗಳನ್ನು ಸುಳ್ಳುಗಾರರು ಎಂದು ಭಾವಿಸುತ್ತಾರೆ. ಅವನನ್ನು ನಂಬಿ ನಾವು ಮಾಡಬೇಕಾದುದೇನು ಎಂದು ಯೋಚಿಸುತ್ತಾರೆ. ಅಲ್ಲಾಹನು ಎಂತಹ ಜನರನ್ನು ಕಳುಹಿಸುತ್ತಾನೆಂದರೆ ಅವರು ಬಾಹ್ಯವಾಗಿ ಚಿಕ್ಕವರೆಂದು ಕಾಣಿಸುತ್ತಾರೆ. ಆದರೆ ಮುಂದಿನ ಕಾಲದಲ್ಲಿ ಅಂತಹ ಜನರಿಗೋಸ್ಕರ ಜೀವ ನೀಡಲು ಲಕ್ಷಾಂತರ ಜನರು ಸಿದ್ಧರಾಗುತ್ತಾರೆ. ಇದೇ ರೀತಿ ಖಾದಿಯಾನ್‌ನಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು. ಖಾದಿಯಾನಿನಲ್ಲಿ ಮೊದಲು ರೈಲು ಮಾರ್ಗವಾಗಲಿ, ಪೋಸ್ಟ್ ಆಫೀಸಾಗಲಿ, ಧಾರ್ಮಿಕ, ಅಥವಾ ಲೌಕಿಕ ಜ್ಞಾನ ನೀಡುವ ಮದರಸಗಳಾಗಲೀ ಶಾಲೆಗಳಾಗಲೀ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಲೌಕಿಕವಾದ ಹೆಗ್ಗಳಿಕೆ ಇರಲಿಲ್ಲ. ಅವರ ವಿದ್ಯಾಭ್ಯಾಸ ಸಹ ಸಾಮಾನ್ಯವಾಗಿತ್ತು. ಅವರು ತಾನು ಮಹ್‌ದೀ ಮಸೀಹ್ ಎಂದು ವಾದಿಸಿದಾಗ ಜನರು ಬೊಬ್ಬೆ ಹೊಡೆದರು. ಈ ವ್ಯಕ್ತಿ ಜಾಹಿಲ್ (ಅಜ್ಞಾನಿ) ಆಗಿದ್ದಾನೆ. ಇವನು ಮಹ್‌ದಿ ಆಗುವುದು ಹೇಗೆ? ಈ ಚಿಕ್ಕ ಗ್ರಾಮದಲ್ಲಿ ದೇವನಿಯೋಗಿತನು ಹೇಗೆ ತಾನೆ ಆಗಮಿಸುವನು? ಎಂದು ಸಹ ಕೆಲವರು ಕೇಳಿದರು. ಲಾಹೋರು, ಅಮೃತಸರ ಅಥವಾ ಬೇರೆ ದೊಡ್ಡ ನಗರಗಳಲ್ಲಿ ದೇವನಿಯೋಗಿತನು ಆಗಮಿಸಬೇಕಾಗಿತ್ತು ಎಂದು ಅವರು ಹೇಳಿದರು. ಜನರು ಬಹಳ ವಿರೋಧ ಸೂಚಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಾಣಲು ಬರುವವರನ್ನು ಸಹ ತಡೆಯಲಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನು ಅವರಿಗೆ ಹೀಗೆ ಸಂದೇಶವಾಣಿ ಅರುಹಿದನು:

**ದುನ್‌ಯಾ ಮೇ ಏಕ್ ನಝೀರ್ ಆಯಾ ಪರ್ ದುನ್‌ಯಾನೆ ಉಸೇ ಖಬೂಲ್ ನ ಕಿಯಾ ಲೇಕಿನ್ ಖುದಾ ಉಸೇ ಖಬೂಲ್ ಕರೇಗಾ ಔರ್ ಬಡೇ ಝೋರ್ ಆವರ್ ಹಮ್ಲೋಂಸೆ ಉಸ್‌ಕಿ ಸಚ್ಚಾಯಿ ಝಾಹಿರ್ ಕರೇಗಾ.**

ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಆಗಮಿಸಿದನು. ಲೋಕವು ಅವನನ್ನು ಅಂಗೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಅಂಗೀಕರಿಸುವನು. ಮತ್ತು ಬಹಳ ತೀವ್ರ ತರ ಆಕ್ರಮಣಗಳ ಮೂಲಕ ಅವನ ಸತ್ಯತೆಯನ್ನು ಪ್ರಕಟಗೊಳಿಸುವನು.''

ಈ ಸಂದೇಶವಾಣಿ ಲಭಿಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಒಬ್ಬನೂ ಇರಲಿಲ್ಲ.

ಇನ್ನೊಂದು ಇಲ್‌ಹಾಮ್ ಹೀಗೆ ಲಭಿಸಿತು: **''ಮೈಂ ತೇರೀ ತಬ್ಲೀಗ್ ಕೋ ದುನ್‌ಯಾಕಿ ಕಿನಾರೋಂ ತಕ್ ಪಹೂಂಚಾವ್ರೂಂಗಾ.''** (ನಾನು ನಿನ್ನ ಸಂದೇಶವನ್ನು ಲೋಕದ ಎಲ್ಲೆಗಳ ತನಕ ತಲಪಿಸುವೆನು.)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಪೀರಾ ಎಂಬ ಹೆಸರಿನ ಮಂಕು ಬುದ್ಧಿಯ ಒಬ್ಬ ಸೇವಕನಿದ್ದನು. ಅವನು ಸಾರಿಗೆ ಸೀಮೆ ಎಣ್ಣೆ ಸೇರಿಸಿ ಕುಡಿಯುತ್ತಿದ್ದನು. ಅವನನ್ನು ಕೆಲವೊಮ್ಮೆ ಯಾವುದಾದರೂ ಕೆಲಸದ ನಿಮಿತ್ತ ಬಟಾಲಕ್ಕೆ ಕಳುಹಿಸಲಾಗುತ್ತಿತ್ತು. ಒಮ್ಮೆ ಬಟಾಲಕ್ಕೆ ಅವನು ಹೋದಾಗ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಅವನನ್ನು ಕಂಡರು. ಅವರು ಅಹ್ಲೇ ಹದೀಸ್ ಪಂಗಡದ ನಾಯಕರೂ ಬಹಳ ದೊಡ್ಡ ಮೌಲವಿ ಎಂದು ಭಾವಿಸಲ್ಪಡುತ್ತಿದ್ದರು. ಅವರು ಮಾಡುತ್ತಿದ್ದ ಕೆಲಸವೇನೆಂದರೆ ಬಟಾಲ ಮೂಲಕ ಖಾದಿಯಾನಿಗೆ ಹೋಗುವ ಜನರೊಂದಿಗೆ ಹೀಗೆ ಹೇಳುತ್ತಿದ್ದರು: ಮಹ್‌ದೀ ಮಸೀಹ್ ಎಂದು ವಾದಿಸುವವ ಓರ್ವ ಖಾದಿಯಾನಿನಲ್ಲಿ ವ್ಯಾಪಾರದಂಗಡಿ ತೆರೆದಿದ್ದಾನೆ. ಅವನು ಸುಳ್ಳುಗಾರ. ನೀವು ಖಾದಿಯಾನಿಗೆ ಹೋಗಿ ಮಾಡಲಿಕ್ಕೇನಿದೆ! ಎಂದು ಹೇಳಿ ಅವರನ್ನು ತಡೆಯಲು ಶ್ರಮಿಸುತ್ತಿದ್ದರು.

ಹೀಗಿದ್ದರೂ ಖಾದಿಯಾನಿಗೆ ಜನರು ಬರುತ್ತಾ ಇದ್ದರು. ಒಂದು ದಿನ ಈ ಮೌಲವಿಗೆ ಬೇರೆ ಯಾರೂ ಸಿಗಲಿಲ್ಲ. ಪೀರಾ ಕಾಣಲು ಸಿಕ್ಕಿದನು. ಪೀರಾನೊಂದಿಗೆ ಆ ಮೌಲವಿ ಹೇಳಿದರು: ನೀನು ಖಾದಿಯಾನಿನ ಆ ವ್ಯಕ್ತಿಯೊಂದಿಗೆ ಇರಬಾರದು. ಅವನು ನಿನ್ನ ಈಮಾನನ್ನು ನಾಶಮಾಡುವನು. ಮೌಲವಿಯ ಮಾತನ್ನು ಆಲಿಸಿ ಪೀರಾ ಹೇಳಿದನು: ನೀವು ಹೇಳುವುದೆಲ್ಲಾ ನನಗೆ ಅರ್ಥವಾಗುವುದಿಲ್ಲ. ಆದರೆ, ಮಿರ್ಝಾ ಸಾಹೇಬರು ಕೆಟ್ಟವರೆಂದು ನೀವು ಹೇಳಿದುದು ನನಗೆ ತಿಳಿಯಿತು. ನೋಡಿರಿ, ನೀವು ಜನರನ್ನು ಖಾದಿಯಾನಿಗೆ ಹೋಗಬಾರದೆಂದು ತಡೆಯುತ್ತಿರುವಿರಿ. ಆದರೆ ಅಲ್ಲಾಹನು ಮಿರ್ಝಾ ಸಾಹೇಬರ ಜೊತೆಗಿರುವುದು ನನಗೆ ಕಾಣುತ್ತದೆ. ಅಲ್ಲಾಹನು ನಿಮ್ಮ ಜೊತೆಗಿಲ್ಲ. ಜನರನ್ನು ತಡೆಯಲು ನೀವು ಎಷ್ಟು ಪ್ರಯತ್ನ ಮಾಡುತ್ತಾ ಇದ್ದರೂ ನೂರಾರು ಜನರು ನಡೆದುಕೊಂಡು ಖಾದಿಯಾನಿಗೆ ಆಗಮಿಸುತ್ತಿದ್ದಾರೆ. ಆದರೆ ನಿಮ್ಮ ಸಮೀಪಕ್ಕೆ ಯಾರೂ ಬರುವುದಿಲ್ಲ.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆಯುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದವನ್ನು ಆಲಿಸಿ ಖಾದಿಯಾನಿಗೆ ಆಗಮಿಸಿದ ಮಹನೀಯರಲ್ಲಿ ಒಬ್ಬರು ಸಾಹಿಬ್‌ಝಾದ ಅಬ್ದುಲ್ಲತ್ತೀಫ್ ಶಹೀದ್ ಸಾಹೇಬರು ಆಗಿದ್ದರು. ಅವರು ಹಜ್ಜ್ ಮಾಡಲು ಅಫ್‌ಗಾನಿಸ್ಥಾನದಿಂದ ಹೊರಟವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದದ ಬಗ್ಗೆ ತಿಳಿದು ಖಾದಿಯಾನಿಗೆ

ಬಂದು ಬೈಅತ್ ಮಾಡಿದರು. ನಂತರ ಅವರು ತಮ್ಮ ಊರಿಗೆ ಮರಳಿದಾಗ ಅವರು ತಮ್ಮ ವಿಶ್ವಾಸವನ್ನು ಬಿಟ್ಟು ಬಿಡಬೇಕೆಂದು ಜನರು ಬಹಳ ಒತ್ತಡ ಹೇರಿದರೂ ಅವರು ಅದಕ್ಕೆ ಒಪ್ಪಲಿಲ್ಲ. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಸಂಧತೆ ಅವರಿಗೆ ಸ್ಪಷ್ಟವಾಗಿತ್ತು. ಅವರಿಗೆ ಅಫ್ಗಾನಿಸ್ಥಾನದ ದೊರೆ ಕಲ್ಲೆಸೆದು ಕೊಲ್ಲುವ ಶಿಕ್ಷೆ ವಿಧಿಸಿದನು. ಅವರು ಅತ್ಯಂತ ಕ್ರೂರವಾಗಿ ಕೊಲ್ಲಲ್ಪಟ್ಟರು. ಅವರು ದೇವಮಾರ್ಗದಲ್ಲಿ ತನ್ನ ಜೀವಾರ್ಪಣೆ ಮಾಡಿದರು.

ಕಲ್ಲೆಸೆದು ಕೊಲ್ಲುವ ಮೊದಲು ದೊರೆಯ ಒಬ್ಬ ಮಂತ್ರಿ ಶಹೀದರ ಸಮೀಪ ಬಂದು ಹೇಳಿದರು: ನೀವು ನಿಮ್ಮ ಹೃದಯದಲ್ಲಿ ನಿಮ್ಮ ನಂಬಿಕೆ ಇರಿಸಿಕೊಳ್ಳಿರಿ. ಆದರೆ ಕೇವಲ ಬಾಯಿಯಲ್ಲಿ ನಿರಾಕರಿಸಿರಿ. ಆಗ ಶಹೀದರು ಹೇಳಿದರು: 'ನಾನು ಸುಳ್ಳು ಹೇಳಲಾರೆ.'

ಅಂತೂ ಅವರನ್ನು ಶಹೀದರನ್ನಾಗಿ ಮಾಡಲಾಯಿತು. ಆದರೆ ಕೆಲವೇ ದಿನಗಳೊಳಗೆ ಅಫ್ಗಾನಿಸ್ಥಾನದಲ್ಲಿ ಕಾಲರಾ ರೋಗ ವ್ಯಾಪಕವಾಗಿ ಹಬ್ಬಿ ಸಾವಿರಾರು ಜನರು ಸತ್ತರು. ನೀವು ನೋಡಿರಿ ಈಗ ಸಹ ಅಫ್ಗಾನಿಸ್ಥಾನದಲ್ಲಿ ವಿನಾಶವೇ ಹಬ್ಬುತ್ತಾ ಇದೆ.

ಅಲ್ಲಾಹನು ಅಹ್ಮದಿಯರಲ್ಲಿ ಧಾರ್ಮಿಕ ಅಭಿಮಾನ ಹುಟ್ಟಿಸುವವನಾಗಲಿ. ಅಲ್ಲಾಹನೊಂದಿಗೆ ಸಂಬಂಧ ವರ್ಧಿಸುವಂತೆ ಮಾಡಲಿ. ಸಹನೆ ಮತ್ತು ಧೈರ್ಯ ಉಂಟುಮಾಡಲಿ. ಮಾನವೀಯತೆಯನ್ನು ರಕ್ಷಿಸಲು ಪ್ರಾರ್ಥನೆಯನ್ನು ಮಾಡಲು ನಮಗೆ ಭಾಗ್ಯ ದೊರಕಲಿ. ನಮ್ಮ ಅಹಂಕಾರದ ಮೇಲೆ ವಿನಯ ಜಯಶಾಲಿಯಾಗುವಂತೆ ಮಾಡಲಿ. ಅಲ್ಲಾಹನ ಸಂಪ್ರೀತಿಗಳಿಸುವ ರೀತಿಯಲ್ಲಿ ನಾವು ಪೂರ್ಣವಾಗಿ ವರ್ತಿಸುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ನಾವು ಈಡೇರಿಸುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತನ್ನು ಸೇರಿದವರೂ ತನ್ನನ್ನು ನಂಬುವವರೂ ಆಗಿರುವ ಜನರಿಂದ ಅವರು ಮಾಡಬೇಕೆಂದು ಆಶಿಸಿರುವವುಗಳಲ್ಲಿ ಪ್ರತಿಯೊಂದನ್ನೂ ನಾವು ಮಾಡುವವರಾಗೋಣ. ಅಲ್ಲಾಹನು ನಮಗೆ ಅದರ ತೌಫೀಕ್ ನೀಡಿ ಅನುಗ್ರಹಿಸಲೀ– ಆಮೀನ್.

---------------*****--------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 24-10-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*